# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 323 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 29.01.2026 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಡಿ.ಎ ವತಿಯಿಂದ ನಿರ್ಮಾಣವಾಗುತ್ತಿರುವ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಸೋಮಶೆಟ್ಟಿಹಳ್ಳಿ ಗ್ರಾಮದ ಎಷ್ಟು ರೈತರಿಗೆ ದೃಢೀಕರಣ ಪತ್ರ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಡಾ\|\| ಕೆ. ಶಿವರಾಮ ಕಾರಂತ ಬಡಾವಣೆಯ ಸೋಮಶೆಟ್ಟಿಹಳ್ಳಿ ಗ್ರಾಮದ ಒಟ್ಟು 390 ಎಕರೆ 32.75 ಗುಂಟೆ ವಿಸ್ತೀರ್ಣದ ಜಮೀನು ಭೂಸ್ವಾಧೀನವಾಗಿದ್ದು, ಈ ಪೈಕಿ 200ಎಕರೆ 10 ಗುಂಟೆ ವಿಸ್ತೀರ್ಣದ ಜಮೀನಿನ ಭೂಮಾಲೀಕರು / ರೈತರಿಗೆ ದೃಢೀಕರಣ ಪತ್ರ ನೀಡಲಾಗಿದೆ. |
| ಆ | ಹಲವು ರೈತರು ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದರೂ ಸಹ ದೃಢೀಕರಣ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಡಾ\|\| ಕೆ.ಶಿವರಾಮಕಾರಂತ ಬಡಾವಣೆಯ ಭೂಮಾಲೀಕರಿಗೆ ದಾಖಲೆಗಳನ್ನು ಪರಿಶೀಲಿಸಿ ಅರ್ಹತಾ ಪ್ರಮಾಣ ಪತ್ರಗಳನ್ನು (Entitlement Certificate) 40:60ರ ಅನುಪಾತದಲ್ಲಿ ಈ ಕೆಳಕಂಡಂತೆ ನೀಡಲಾಗುತ್ತಿದೆ.<br>**ಅ)**ಭೂಮಿ ಖಾಲಿಯಿದ್ದು ಬಡಾವಣೆಗೆ ಬಳಸಿಕೊಂಡಿದ್ದಲ್ಲಿ ಪೂರ್ಣ ಪ್ರಮಾಣದ ಅರ್ಹತಾ ಪ್ರಮಾಣ ಪತ್ರ (Clear EC);<br>**ಆ)**ನ್ಯಾಯಾಲಯದ ಪ್ರಕರಣಗಳು / ವ್ಯಾಜ್ಯಗಳು / ಕಂದಾಯ ವ್ಯಾಜ್ಯಗಳು / ತಕರಾರು ಇದ್ದಲ್ಲಿ ಷರತ್ತು ಬದ್ಧ ಅರ್ಹತಾ ಪ್ರಮಾಣ ಪತ್ರ (Conditional EC);<br>**ಇ)**ಅಭಿವೃದ್ಧಿ ಹೊಂದಿದ ಪ್ರದೇಶ, ಕಂದಾಯ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿದ್ದಲ್ಲಿ, ಶೂನ್ಯ ದೃಢೀಕರಣ ಪ್ರಮಾಣ ಪತ್ರ (Nil EC) |
| ಇ | ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.50/1 ಅನ್ನು ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳಲಾಗಿದೆಯೇ; | ಹೌದು |

| | | |
|---|---|---|
| ಈ | ಜಮೀನು ಸ್ವಾಧೀನಪಡಿಸಿಕೊಂಡ ನಂತರ ಶೇ 40ರ ಅನುಪಾತಕ್ಕೆ ದೃಢೀಕರಣ ನೀಡದಿರಲು ಕಾರಣಗಳೇನು; ದೃಢೀಕರಣ ಪಡೆಯಲು ಅವರು ಸಲ್ಲಿಸಿರುವ ದಾಖಲೆಗಳು ಯಾವುವು; ಮತ್ತು ಬಾಕಿ ಇರುವ ದಾಖಲೆಗಳು ಯಾವುವು; | ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.50/1ಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರಣಗಳಿಂದ ಶೂನ್ಯ ದೃಢೀಕರಣ ಪತ್ರವನ್ನು ನೀಡಲಾಗಿರುತ್ತದೆ.<br>• ಆರ್.ಟಿ.ಸಿ ಯಲ್ಲಿ ವಿಸ್ತೀರ್ಣದ ಕಾಲಂ. 3 ಮತ್ತು 9ರ ವಿಸ್ತೀರ್ಣವು ವ್ಯತ್ಯಾಸವಾಗಿರುತ್ತದೆ.<br>• ಖರಾಬ್ ವಿಸ್ತೀರ್ಣ ಸೇರಿ ಖಾತೆಯಾಗಿರುತ್ತದೆ.<br>• ಭಾಗಶ: ಕಟ್ಟಡಗಳಿಂದ ಕೂಡಿರುತ್ತದೆ.<br>• ಕಂದಾಯ ನಿವೇಶನಗಳು ರಚನೆಯಾಗಿರುವುದು ಕಂಡುಬಂದಿರುತ್ತದೆ.<br><br>ದೃಢೀಕರಣ ಪ್ರಮಾಣ ಪತ್ರ ಕೋರಿ ಭೂಮಾಲೀಕರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.<br>1. ದೃಢೀಕೃತ ಪಹಣಿ, ಮ್ಯುಟೇಷನ್ ಹಾಗೂ ಐಎಲ್‌ಆರ್ ಪ್ರತಿಗಳು.<br>2. 2007-08ನೇ ಸಾಲಿನಿಂದ ಈವರೆಗಿನ ಋಣಭಾರ ಪ್ರಮಾಣ ಪತ್ರ (ನಮೂನೆ-15).<br>3. ಹಕ್ಕುದಾರಿಕೆಯ ಬಗ್ಗೆ ಪಂಚಾಯಿತಿ ಪಾರೀಕತ್ ಹಾಗೂ ನ್ಯಾಯಾಲಯದ ಡಿಕ್ರಿ ಆದೇಶದ ದೃಢೀಕೃತ ಪ್ರತಿ.<br>4. ಗೇಣಿ ರಹಿತ ಹಿಂಬರಹ.<br>5. ತಹಶೀಲ್ದಾರ್ ರವರಿಂದ ಪಡೆದ ದೃಢೀಕೃತ ವಂಶವೃಕ್ಷದ ಪ್ರತಿ.<br>6. ಪ್ರಮಾಣ ಪತ್ರ.<br>7. ಇಂಡಿಮ್ನಿಟಿ ಬಾಂಡ್.<br>8. ಮುಚ್ಚಳಿಕೆ ಪತ್ರ.<br>9. ಭೂಪರಿಹಾರ ಕೋರಿ ಸಲ್ಲಿಸುವ ಅರ್ಜಿ.<br>10. ಗುರುತಿನ ಚೀಟಿ.<br>11. ಭಾವಚಿತ್ರ ದೃಢೀಕರಣ ಪತ್ರ.<br><br>ಸದರಿ ಜಮೀನಿನ ಪಹಣಿ (RTC) ಕಾಲಂ.3 ಮತ್ತು 9ರ ವಿಸ್ತೀರ್ಣವು ತಾಳೆಯಾಗುವಂತೆ ಸಕ್ಷಮ ಪ್ರಾಧಿಕಾರದಿಂದ ತಿದ್ದುಪಡಿ ಮಾಡಿಸಿಕೊಂಡು, ಪಹಣಿಯನ್ನು (RTC) ಸಲ್ಲಿಸುವುದು ಬಾಕಿ ಇರುತ್ತದೆ. |

**ಸಂಖ್ಯೆ**: ನಅಇ 27 ಬೆಂಭೂಸ್ವಾ 2026

**(ಡಿ ಕೆ ಶಿವಕುಮಾರ್)**
ಉಪ ಮುಖ್ಯಮಂತ್ರಿ